# ಮಲ್ಯ ಬರುವರೆ?

ಲಂಡನ್ನಿನಲ್ಲಿ ಎಫ್1 ಕಾರ್ ರೇಸ್ ನಲ್ಲಿ ಭಾಗವಹಿಸುತ್ತಾ ಆರಾಮವಾಗಿರುವ ಉದ್ಯಮಿ ವಿಜಯ್ ಮಲ್ಯ ಅವರನ್ನು ವಿಚಾರಣೆಗಾಗಿ ಭಾರತಕ್ಕೆ ಕರೆತರುವ ಪ್ರಯತ್ನಗಳು ಮುಂದುವರಿದಿವೆ. ಕಳೆದ ವಾರ ನವದೆಹಲಿಯಲ್ಲಿ ಭಾರತ ಮತ್ತು ಇಂಗ್ಲೆಂಡಿನ ವಿದೇಶಾಂಗ ಅಧಿಕಾರಿಗಳು ಸಭೆ ಸೇರಿ ಈ ಬಗ್ಗೆ ಚರ್ಚೆ ನಡೆಸಿದರು. ಸಭೆಯಲ್ಲಿ ವಿಜಯ್ ಮಲ್ಯ ಗಡೀಪಾರಿನ ಬಗ್ಗೆಯೂ ಪ್ರಸ್ತಾಪವಾಯಿತು. ಉಭಯದೇಶಗಳಲ್ಲಿ ಆಶ್ರಯ ಪಡೆದಿರುವ ಅಪರಾಧಿ/ ಆರೋಪಿಗಳನ್ನು ಗಡೀಪಾರು ಮಾಡಿ ಹಸ್ತಾಂತರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಭೆ ತೀರ್ಮಾನಿಸಿತು. 'ಗಡೀಪಾರು ಪ್ರಕ್ರಿಯೆಯನ್ನು ಶೀಘ್ರವಾಗಿ ಮಾಡಲು ನಾವು ಆರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರಬೇಕು' ಎಂದು ಸಭೆ ನಿರ್ಧರಿಸಿತು! ಅಂದರೆ ಇನ್ನು ಆರು ತಿಂಗಳವರೆಗಂತೂ ಮಲ್ಯ ಸಾಹೇಬರು ಭಾರತಕ್ಕೆ ಮರಳುವುದಿಲ್ಲ ಎನ್ನುವುದು ಖಚಿತವಾಯಿತು. ಇದೇ ವೇಳೆ ಲಂಡನ್ನಿನ ಎಫ್1 ರೇಸ್‌ನಲ್ಲಿ ಮಲ್ಯ ಅವರ ಒಡೆತನದ ತಂಡ ಮೊದಲ ಮೂರು ಸ್ಥಾನಗಳಲ್ಲಿ ಒಂದನ್ನು ಗೆಲ್ಲುವುದು ಖಚಿತ ಎಂಬ ವರದಿಗಳೂ ಪ್ರಕಟವಾದವು.

ಇಂಗ್ಲೆಂಡಿನಲ್ಲಿ ಭಾರತಕ್ಕೆ ಬೇಕಾಗಿರುವ ನೂರಾರು ಅಪರಾಧಿಗಳು/ ಆರೋಪಿಗಳು ನೆಲೆಸಿದ್ದಾರೆ. ಇವರನ್ನೆಲ್ಲ ಭಾರತಕ್ಕೆ ಕರೆಸುವುದು ಅಷ್ಟೊಂದು ಕಷ್ಟ ಏಕಾಗಿದೆ? ಒಂದು ವರ್ಷದ ಹಿಂದೆ ಫೆಬ್ರುವರಿಯಲ್ಲಿ ದೆಹಲಿಯಲ್ಲಿ ಭಾರತದ ಗೃಹ ಖಾತೆಯ ಸಹಾಯಕ ಸಚಿವ ರಿಜಿಜು ಮತ್ತು ಇಂಗ್ಲೆಂಡಿನ ವಲಸೆ ಸಚಿವ ಜೇಮ್ಸ್ ಬ್ಯಾಕನ್‌ಶೈರ್ ಹೀಗೆಯೇ ಸಭೆ ನಡೆಸಿದ್ದರು. ಆಗ ನಮ್ಮ ಸಚಿವರು 131 ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದವರ ಪಟ್ಟಿಯೊಂದನ್ನು ಕೊಟ್ಟು, 'ಇವರನ್ನೆಲ್ಲ ಶೀಘ್ರ ಭಾರತಕ್ಕೆ ಗಡೀಪಾರು ಮಾಡಲು ನೆರವಾಗಿ' ಎಂದು ಮನವಿ ಮಾಡಿದ್ದರು. ಅವರೂ 'ಯೆಸ್' ಎಂದು ಹೇಳಿ ಕೈಕುಲುಕಿ ತಮ್ಮ ದೇಶಕ್ಕೆ ಹೊರಟುಹೋದರು. ಈಗ ಒಂದು ವರ್ಷದ ಬಳಿಕ ಇನ್ನೊಂದು ಮಹತ್ವದ ಸಭೆ ನಡೆದಿದೆ.



ಭಾರತಕ್ಕೆ ಬೇಕಾದ ಒಟ್ಟು 16 ಕುಖ್ಯಾತ ಅಪರಾಧಿಗಳು/ ಆರೋಪಿಗಳು ಲಂಡನ್ನಿನಲ್ಲಿ ವಾಸವಾಗಿದ್ದಾರಂತೆ! ಅವರಲ್ಲಿ ಗುಜರಾತ್ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದ ಒಬ್ಬ ಕ್ರಿಮಿನಲ್‌ನನ್ನು ಮತ್ತು ಮುಂಬೈ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಇನ್ನೊಬ್ಬಾತನನ್ನು ಭಾರತಕ್ಕೆ ಕೆಲವು ವರ್ಷಗಳ ಹಿಂದೆಯೇ ಗಡೀಪಾರು ಮಾಡಲಾಗಿದೆ. ಈಗ ಆ ಪಟ್ಟಿಗೆ ವಿಜಯ್ ಮಲ್ಯ ಅವರ ಹೆಸರೂ ಸೇರಿಕೊಂಡಿದೆ. ಆದರೆ ಮಲ್ಯ ಅವರನ್ನು 'ಕುಖ್ಯಾತ ಆರೋಪಿ' ಎನ್ನಬಹುದೆ? ಅವರದ್ದೇನಿದ್ದರೂ ಆರ್ಥಿಕ ಅಪರಾಧ ಅಲ್ಲವೆ... ಎಂದು ಪ್ರಶ್ನಿಸುವವರೂ ಇದ್ದಾರೆ. ಸ್ವತಃ ಮಲ್ಯ ಅವರೇ ಇತ್ತೀಚೆಗೆ ಲಂಡನ್ನಿನಲ್ಲಿ ಪತ್ರಕರ್ತರ ಜತೆ ಮಾತನಾಡಿ, 'ನಾನು ಬ್ರಿಟನ್ನಿನ ಕಾನೂನಿನ ಪ್ರಕಾರ ಇಲ್ಲಿ ಸುರಕ್ಷಿತವಾಗಿದ್ದೇನೆ. ಕಿಂಗ್‌ಫಿಶರ್ ವಿಮಾನ ಕಂಪೆನಿಯ ನಷ್ಟಕ್ಕೆ ನಾನು ವೈಯಕ್ತಿಕವಾಗಿ ಕಾರಣನಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ವಾಸ್ತವವಾಗಿ ನನ್ನ ವಿರುದ್ಧ ಇದ್ದುದು ಸಿವಿಲ್ ಕೇಸ್‌ಗಳು. ಆದರೆ ಭಾರತ ಸರ್ಕಾರದ ಒತ್ತಡದ ಮೇರೆಗೆ ಸಿಬಿಐ ಅವುಗಳನ್ನು ಕ್ರಿಮಿನಲ್ ಕೇಸ್‌ಗಳೆಂದು ಪರಿವರ್ತಿಸಿವೆ' ಎಂದಿದ್ದಾರೆ.

ಭಾರತದ ವಿವಿಧ ಬ್ಯಾಂಕುಗಳಿಗೆ ಒಟ್ಟು 9400 ಕೋಟಿ ರೂಪಾಯಿ ಸಾಲದ ಉದ್ದೇಶಪೂರ್ವಕ ಸುಸ್ತಿದಾರ ಎಂದು ವಿವಿಧ ಬ್ಯಾಂಕುಗಳು ವಿಜಯ್ ಮಲ್ಯ ಮೇಲೆ ಮೊಕದ್ದಮೆಗಳನ್ನು ಹೂಡಿವೆ. ಕಳೆದ ವಾರ ಸುಪ್ರೀಂಕೋರ್ಟ್‌ನಲ್ಲಿ ಕಿಂಗ್‌ಫಿಶರ್ ಸಾಲದ ಒಂದು ಪ್ರಕರಣ ತನಿಖೆಗೆ ಬಂತು. ಬ್ಯಾಂಕಿಗೆ 1300 ಕೋಟಿ ರೂಪಾಯಿ ಸಾಲ ಬಾಕಿ ಉಳಿಸಿರುವ ಪ್ರಕರಣವಿದು. ಈ ಪ್ರಕರಣಕ್ಕೂ ಹತ್ತಾರು ಆಯಾಮಗಳಿವೆ. 1000 ಪುಟಗಳ ಆರೋಪಪಟ್ಟಿಯಲ್ಲಿ ಇದ್ದ ಒಂದು ಆರೋಪವೆಂದರೆ, ಬ್ರಿಟನ್ನಿನ ಲಿಕ್ಕರ್ ಕಂಪೆನಿ ಡಿಯಾಜಿಯೊ, ಯುಬಿ ಕಂಪೆನಿಗೆಂದು ಕೊಟ್ಟ 40 ಲಕ್ಷ ಡಾಲರ್ ಹಣವನ್ನು ಮಲ್ಯ ಅವರು ತಮ್ಮ ಮಕ್ಕಳ ಖಾತೆಗೆ ವರ್ಗಾಯಿಸಿದ್ದಾರೆ ಎನ್ನುವುದು! ಒಂದೇ ಆಸ್ತಿಯನ್ನು ಬೇರೆ ಬೇರೆ ವಿಭಾಗಗಳನ್ನಾಗಿ ಮಾಡಿ ಬೇರೆ ಬೇರೆ ಬ್ಯಾಂಕುಗಳಿಗೆ ಅಡವಿಟ್ಟು ಸಾಲ ಪಡೆದಿರುವ ಮಲ್ಯ ಅವರನ್ನು ಕಾನೂನಿನ ಬಲೆಯಲ್ಲಿ ಬಂಧಿಸುವುದು ಅಷ್ಟು ಸುಲಭ ಇರುವಂತೆ ಕಾಣಿಸುತ್ತಿಲ್ಲ. ಈಗಾಗಲೆ ಮುಟ್ಟುಗೋಲು ಮಾಡಿಕೊಂಡ ಕೆಲವು ಆಸ್ತಿಗಳನ್ನು ಮಾರಲೂ ಬ್ಯಾಂಕುಗಳಿಗೆ ಕಾನೂನು ತೊಡಕುಗಳಿವೆ.

ಏರ್‌ಬಸ್ 320 ವಿಮಾನಗಳಿಗೆ ಪ್ರಾಟ್ ಅಂಡ್ ವಿಟ್ನೀ ಕಂಪೆನಿ ಎಂಜಿನ್‌ಗಳನ್ನು ಒದಗಿಸಿದೆ. ಇಂಡಿಗೊ ಮತ್ತು ಗೋ ಏರ್ ಬಳಸುತ್ತಿರುವ ಈ ಎಂಜಿನ್‌ಗಳಲ್ಲಿ ಲೋಪಗಳಿವೆಯೆಂಬ ದೂರು ಕೇಳಿಬಂದು ಆ ಬಗ್ಗೆ ತನಿಖೆಗೆ ಸರ್ಕಾರ ಆದೇಶ ನೀಡಿದೆ. 'ನನ್ನ ಕಿಂಗ್‌ಫಿಶರ್ ವಿಮಾನಗಳಲ್ಲೂ ಇದೇ ಎಂಜಿನ್ ಬಳಕೆಯಾಗಿದೆ. ನನ್ನ ಕಂಪೆನಿ ನಷ್ಟ ಹೊಂದಲು ಆ ಎಂಜಿನ್‌ಗಳೇ ಕಾರಣ. ನಾನು ಆ ಕಂಪೆನಿಗೆ ಹಿಂದೆಯೇ ನೋಟಿಸ್ ನೀಡಿದ್ದೆ' ಎಂದಿದ್ದಾರೆ ಮಲ್ಯ! ಒಟ್ಟಾರೆ ಬ್ಯಾಂಕುಗಳ ಹಣ ಮುಳುಗಿರುವುದಕ್ಕೆ ತಮ್ಮೊಬ್ಬರನ್ನು ಬಿಟ್ಟು ಬೇರೆ ಎಲ್ಲರೂ ಕಾರಣರು ಎಂದು ಮಲ್ಯ ಅವರು ತಿಳಿದಂತಿದೆ. 'ಸರ್ಕಾರದ ತಪ್ಪು ನೀತಿಗಳೂ ಕಿಂಗ್‌ಫಿಶರ್ ದಿವಾಳಿಯಾಗಲು ಕಾರಣ' ಎಂದೂ ಹಿಂದೊಮ್ಮೆ ಮಲ್ಯ ಹೇಳಿದ್ದರು.

ಸದ್ಯಕ್ಕೆ ವಿಜಯ್ ಮಲ್ಯ ಲಂಡನ್ನಿನ ಐಶಾರಾಮಿ ತೋಟದ ಮನೆಯಲ್ಲಿ ವಾಸಿಸುತ್ತಿದ್ದಾರೆ. ಈ ಬಂಗಲೆಯನ್ನು ಕಾರ್ ರೇಸ್‌ನಲ್ಲಿ ಮೂರು ಬಾರಿ ವಿಶ್ವ ಚಾಂಪಿಯನ್ ಆಗಿರುವ ಲೂಯಿಸ್ ಹ್ಯಾಮಿಲ್ಟನ್‌ನಿಂದ ಅವರು ಖರೀದಿಸಿದ್ದು. ಎಫ್1 ರೇಸ್ ಸಲುವಾಗಿ ಆಫ್ರಿಕಾ, ಆಸ್ಟ್ರೇಲಿಯಾ ಮುಂತಾಗಿ ವಿವಿಧ ದೇಶಗಳಲ್ಲಿ ಅವರು ಸುತ್ತಾಡುತ್ತಿದ್ದಾರೆ. ಭಾರತದಲ್ಲಿ ರೇಸ್ ಇದ್ದರೂ ಅವರು ಬರಲಿಕ್ಕಿಲ್ಲ.

ಚೀನಾದಲ್ಲಿ ಬ್ಯಾಂಕ್ ಸಾಲ ಸುಸ್ತಿದಾರರಿಗೆ ವಿಮಾನ ಟಿಕೆಟ್, ಬುಲೆಟ್ ಟ್ರೈನ್ ಟಿಕೆಟ್, ಕ್ರೆಡಿಟ್ ಕಾರ್ಡ್ ಕೊಡುವುದಿಲ್ಲ. ಹಾಗೆಂದು ಅಲ್ಲಿನ ಸುಪ್ರೀಂಕೋರ್ಟ್ ಪಟ್ಟಿ ಮಾಡಿದೆ. ಈ ಪಟ್ಟಿಯಲ್ಲಿ 61.5 ಲಕ್ಷ ಜನರು ಇದ್ದಾರಂತೆ. ನಮ್ಮಲ್ಲೂ ಹಾಗೆ ಮಾಡಬಹುದೆ? ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65